sdmimd

**Prajavani**

Date: 24-11-2018 Page No: 02

Edition: Mysore Language: Kannada

# ಆರ್ಥಿಕ ಅಸಮಾನತೆಯಿಂದ ಅಭಿವೃದ್ಧಿ ಕುಂಠಿತ



ಮೈಸೂರು: ಅಸಮಾನ ಆರ್ಥಿಕ ಹಂಚಿಕೆಯಿಂದಾಗಿ ದೇಶದ ಅಭಿವೃದ್ಧಿ ಕುಂಠಿತವಾಗಿದೆ ಎಂದು ಸ್ವಾಮಿ ವಿವೇಕಾನಂದ ಯೂತ್‌ಮೂವ್‌ಮೆಂಟ್ ಅಧ್ಯಕ್ಷ ಡಾ.ಆರ್.ಬಾಲಸುಬ್ರಹ್ಮಣ್ಯಂ ಅಭಿಪ್ರಾಯಪಟ್ಟರು.

ಎಸ್‌ಡಿಎಂ ನಿರ್ವಹಣಾ ಸಂಸ್ಥೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ಆರ್ಥಿಕ ಹಾಗೂ ಸುಸ್ಥಿರ ಅಭಿವೃದ್ಧಿ: ಪ್ರಚಲಿತ ವಿದ್ಯಮಾನಗಳು' ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

ದೇಶದ ಆರ್ಥಿಕತೆಗೂ ಸಾಮಾಜಿಕ ಅಭಿವೃದ್ಧಿಗೂ ನಂಟಿದೆ. ಸಾಮಾಜಿಕವಾಗಿ ದೇಶವು ಗಟ್ಟಿಗೊಳ್ಳಬೇಕು ಎಂದರೆ ಜನರ ಬದುಕು ಗಟ್ಟಿಗೊಳ್ಳಬೇಕು. ದೇಶದ ಜಿಡಿಪಿ ಅಭಿವೃದ್ಧಿಯಾದರೆ ಮಾತ್ರ ಸಾಲದು. ಪ್ರತಿಯೊಬ್ಬ ಪ್ರಜೆಯ ಆದಾಯ ಹೆಚ್ಚಿದರೆ ಮಾತ್ರ ಸುಸ್ಥಿರ ಅಭಿವೃದ್ಧಿಯಾಗುವುದು ಎಂದರು.

ಸಂಸ್ಥೆಯ ನಿರ್ದೇಶಕ ಡಾ.ಎನ್.ಆರ್.ಪರಶುರಾಮನ್, ಸಂಕಿರಣದ ಅಧ್ಯಕ್ಷ ಡಾ.ಬಿ.ವೆಂಕಟರಾಜ ವೇದಿಕೆಯಲಿದ್ದರು.